ಶ್ರೀ ಬಿ. ರಾಚಯ್ಯ :—ನಮ್ಮಲ್ಲಿ 28 ಖಾಸಗೀ ಕಾಲೇಜುಗಳು ಇವೆ. ಇವುಗಳಲ್ಲಿ ಕೆಲವು ಸರ್ಕಾರದಿಂದ ಸಹಾಯ ಪಡೆಯುತ್ತಿರುವಂಥವುಗಳು. ಹೀಗೆ ನಮ್ಮಲ್ಲಿ ಇರುವ 44 ಖಾಸಗೀ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುವ ಅಥವಾ ಸರ್ಕಾರವೇ ವಹಿಸಿಕೊಳ್ಳುವುದಕ್ಕೆ ಹೊರಟರೆ ಆ ಮೂಲಕ ಇವುಗಳನ್ನು ನಡೆಸಲು ಸರ್ಕಾರಕ್ಕೆ ನೂರೆಂಟು ಕೋಟಿ ರೂಪಾಯಿಗಳು ಬೇಕಾಗುತ್ತವೆ.

ಶ್ರೀ ಎಸ್. ಬಂಗಾರಪ್ಪ :—ಅಧ್ಯಕ್ಷರೆ, ಕಳೆದ ಜುನಾವಣೆಯಲ್ಲಿ ಈ ರಾಜ್ಯದ ಜನತೆಗೆ ಮಾತು ಕೊಟ್ಟಿರುವ ಪ್ರಕಾರ ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣವಾಗಿ ರದ್ದು ಮಾಡಬೇಕಾಗುತ್ತದೆ. ಇದನ್ನು ರದ್ದು ಮಾಡುವುದು ನಮ್ಮ ದೇಶದ ಒಟ್ಟಾರೆಯ ಅಭಿಪ್ರಾಯವಾಗಿದೆ. ಈ ದಿಸೆಯಲ್ಲಿ 5 ವರ್ಷಗಳ ಕಾಲದವರೆಗೆ ರದ್ದು ಮಾಡುವ ತೀರ್ಮಾನ ಮಾಡಿದ್ದೀವೆನ್ನುವ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಇದು ಜನತೆಯ ಅಭಿಪ್ರಾಯಕ್ಕೆ ವಿರೋಧವಾಗಿರುವುದರಿಂದ ಇದನ್ನು ತಕ್ಷಣ ರದ್ದು ಮಾಡುವ ಕಾನೂನನ್ನು ತರುತ್ತೀರಾ ? ಇದನ್ನು ತರದೇ ಇದ್ದರೆ ನೀವು ಅಲ್ಲಿನ ಮ್ಯಾನೇಜ್‌ಮೆಂಟ್ ನೆನ್ನೊದನೆ ಶಾಮೀಲಾಗಿದ್ದೀರೆಂಬ ಅಭಿಪ್ರಾಯ ಜನತೆಲ್ಲಿ ಬರುತ್ತದೆ. ತಾವು ಈ ಬಗೆ ಶಾಮೀಲಾಗಿದ್ದೀರೆಂಬ ಅಭಿಪ್ರಾಯ ಜನತೆಲ್ಲಿ ಹೋಗುವುದಕ್ಕೆ ತಾವು ತಕ್ಷಣ ಈ ಶುಲ್ಕವನ್ನು ರದ್ದು ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ :— ಶಾಮೀಲಾಗತಕ್ಕದ್ದು ನನಗೆ ಹೊಸಲಿನಿಂದಲೂ ಒಂದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸರ್ಕಾರ ಶಾಮೀಲು ಆಗಿದೆ ಎಂದು.

ಶ್ರೀ ಬಿ. ರಾಚಯ್ಯ :—ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಒಂದು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವವನು ನಾನು. ಯಾವ ಯಾರು ಖಾಸಗೀ ಶಾಲೆಗಳನ್ನು ನಡೆಸಿಕೊಂಡು ದುಡ್ಡು ಸಂಪಾದಿಸಿ ಮಾಡುತ್ತಿದಾರೆ ಅವರೆಲ್ಲಾ ನನಗೂ ಬಹಳ ದೂರ. ಈ ಕ್ಯಾಪಿಟೇಷನ್ ಶುಲ್ಕವನ್ನು ತೆಗೆಯಬೇಕೆಂಬುದನ್ನು ನಾನು ತತ್ಕ್ಷಣ ಒಪ್ಪಿಕೊಂಡಿದೆನೆ. ಮಾನ್ಯ ಸದಸ್ಯರೆಲ್ಲಾ ಇದಕ್ಕೆ ಸಹಕಾರ ನೀಡುವುದಾದರೆ ನಾವು ಇದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ತೆಗೆಯುತ್ತೇವೆಂದು ಹೇಳಿದಾಗ ಅದಕ್ಕೆ ಉಚ್ಚ ನ್ಯಾಯಾಲಯದಿಂದ ತಡೆ ಆಜ್ಞೆ ಬಂದಿದೆ. ತಡೆಯಾಜ್ಞೆಯನ್ನು ಹಿಂತೆಗೆದುಕೊಂಡ ಮೇಲೆ ಆಜ್ಞೆಯನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸಮಗ್ರ ಶಿಕ್ಷಣ ಪೂರ್ವದಲ್ಲೂ ಕೆಲವು ನಿಯಂತ್ರಣಗಳನ್ನು ಇಡುವ ಬಗ್ಗೆ ಸರ್ಕಾರದ ಮುಂದೆ ಬರುತ್ತದೆಂದು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ನನ್ನ ಬಗ್ಗೆ ಮಾತನಾಡುತ್ತಾ ಏನು ಪಗಲಲ್ಲೇ ಶಾಮೀಲು ಆಗುತ್ತಿದ್ದಾರೆಂದು ಹೇಳಿದ್ದಾರೆ. ಆ ರೀತಿ ನನ್ನ ಬಗ್ಗೆ ಹೇಳಿ ಬಾರದೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು:—ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಮುಂದೆ ಲಿಖಿತಮೂಲಕದ ಪ್ರಶ್ನೋತ್ತರಗಳು.

ಶ್ರೀ ಎಂ. ಎಸ್. ಕೃಷ್ಣನ್: - ನನ್ನದೊಂದು ಪ್ರಶ್ನೆ ಇದೆ. ನಾನು ಕೇಳಬೇಕು.

ಉಪಾಧ್ಯಕ್ಷರು: —ದಯವಿಟ್ಟು ಕುಳಿತುಕೊಳ್ಳಿ. ಪ್ರಶ್ನೋತ್ತರದ ವೇಳೆ ಮುಗಿದಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್: —ಲಿಖಿತ ಮೂಲಕದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಗಿದೆ.

ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 4 ನೇ ದರ್ಜೆ ನೌಕರರ ಬಗ್ಗೆ

20 ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್) :—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಿಪಾಯಿಗಳಿಲ್ಲದ ಪ್ರಾಥಮಿಕ ಶಾಲೆಗಳೆಷ್ಟು.

ಆ) ಆ ಶಾಲೆಗಳನ್ನು ತುಂಬಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣಮಂತ್ರಿಗಳು): — ಅ) 1883

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

Sub:–Construction of Primary School Buildings at Humnabad

ಶ್ರೀ ಬಸವರಾಜ ಪಾಟೀಲ್ (ಹುಮನಾ ಬಾದ್) :—ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುಮನಾಬಾದ್ ತಾಲ್ಲೂಕಿನಲ್ಲಿ ಇರುವ ಚಿಟ್ಟಗುಪ್ಪ ನಗರದಲ್ಲಿ ಸರ್ಕಾರಿ ಸಂಯುಕ್ತ ಕಿರಿಯ ಕಾಲೇಜು ಇದ್ದು, ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕಾಲಾ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;